ರೈಕ್ವನಿಗೆ ನಮಸ್ಕರಿಸಿ ರಾಜನು ಹೇಳಿದನು, "ಹೇ ರೈಕ್ವ, ನಾನು ನಿನಗೆ ಅರ್ಪಿಸಲು ಆರು ನೂರು ಗೋವುಗಳು, ಚಿನ್ನದ ಕಂಠೀಹಾರ, ಹೇಸರಗತ್ತೆಗಳಿಂದ ಎಳೆಯಲ್ಪಟ್ಟ ರಥ – ಎಲ್ಲವನ್ನೂ ತಂದಿದ್ದೇನೆ. ದಯವಿಟ್ಟು ಸ್ವೀಕರಿಸಿ ನನಗೆ ಬ್ರಹ್ಮೋಪದೇಶ ಮಾಡು." ಗುರುದಕ್ಷಿಣೆಯನ್ನು ಅರ್ಪಿಸಿ ವಿದ್ಯೆಯನ್ನು ಕಲಿಯಬೇಕು ಎನ್ನುವುದೇನೋ ಸರಿ. ಆದರೆ ಅದನ್ನು, ವಿದ್ಯೆಯನ್ನು ಖರೀದಿಮಾಡುವವನಂತೆ ನೀಡಬಾರದು. ಆದ್ದರಿಂದ ರೈಕ್ವನಿಗೆ ಇದು ಇಷ್ಟವಾಗಲಿಲ್ಲ. ಅವನು ರಾಜನನ್ನು ಚೆನ್ನಾಗಿ ತೆಗಳಿದನು. "ಇವೆಲ್ಲಾ ನಿನಗೇ ಇರಲಿ. ತೆಗೆದುಕೊಂಡು ಹಿಂತಿರುಗು" ಎಂದು ಮುಖ ತಿರುಗಿಸಿಕೊಂಡುಬಿಟ್ಟನು. ರಾಜನಿಗೆ ಅವಮಾನವಾಗಿ ದುಃಖದಿಂದ ಅರಮನೆಗೆ ಹಿಂತಿರುಗಿದನು.

ರಾಜನ ಮನಸ್ಸಿಗೆ ಶಾಂತಿ ಇಲ್ಲ; ಹೇಗಾದರೂ ವಿದ್ಯೆಯನ್ನು ಪಡೆಯಬೇಕೆಂಬ ಬಯಕೆ. ಅದಕ್ಕಾಗಿ ಮತ್ತೆ ರೈಕ್ವನ ಬಳಿಗೆ ಹೊರಟನು. ಈ ಬಾರಿ ಸಹಸ್ರ ಗೋವುಗಳು, ಕಂಠೀಹಾರ, ರಥ ಹಾಗೂ ಅವನ ಸೇವೆ ಮಾಡಲು ತನ್ನ ಮಗಳನ್ನೂ ಕರೆದುಕೊಂಡು ಹೊರಟನು. ವಿದ್ಯೆಯನ್ನು ಕಲಿಯಬೇಕೆಂಬ ಆಕಾಂಕ್ಷೆಯನ್ನು ರಾಜನಲ್ಲಿ ಕಂಡು, ರೈಕ್ವನು ಅವನು ತಂದಿದ್ದೆಲ್ಲವನ್ನೂ ಗುರುದಕ್ಷಿಣೆಯಾಗಿ ಸ್ವೀಕರಿಸಿ, ರಾಜನಿಗೆ ಬ್ರಹ್ಮವಿದ್ಯೆಯನ್ನು ಉಪದೇಶಿಸಿದನು. ಅವನು ಉಪದೇಶಿಸಿದ ವಿದ್ಯೆಗೆ '**ಸಂವರ್ಗ ವಿದ್ಯೆ**' ಎಂದು ಹೆಸರಾಯಿತು.

ಸಂವರ್ಗ ಎಂದರೇನು? ಯಾವುದು ತನ್ನಲ್ಲಿ ಎಳೆದುಕೊಳ್ಳುವುದೋ ಅಥವಾ ಲಯಮಾಡಿಕೊಳ್ಳುವುದೋ ಅದಕ್ಕೆ **ಸಂವರ್ಗ** ಎಂದು ಹೆಸರು. ರೈಕ್ವನು ವಾಯುವನ್ನು ಸಂವರ್ಗ ವಸ್ತು ಎಂದು ಬೋಧಿಸಿದನು. ಕಾರಣ ಪ್ರಲಯಕಾಲದಲ್ಲಿ ಸೂರ್ಯಚಂದ್ರರ ಸ್ವರೂಪವು ನಾಶವಾಗುವಾಗ ತೇಜೋರೂಪವನ್ನು ಪಡೆದ ಅವು ವಾಯುವಿನಲ್ಲಿಯೇ ಲೀನವಾಗುತ್ತವೆ. ಅದ್ದರಿಂದ, ರೈಕ್ವನು ಬ್ರಹ್ಮಜ್ಞಾನವನ್ನು ಪಡೆಯಲು ಸಾಧಕನು ವಾಯುವಿನ ಮೇಲೆ ಧ್ಯಾನ ಮಾಡಬೇಕು ಎಂದು ಬೋಧಿಸಿದನು.

ವಾಯುವಿನ ಮೇಲೆ ಹೇಗೆ **ಧ್ಯಾನ ಮಾಡುವುದು?** ಸಸ್ಯಗಳಾಗಲೀ, ಇತರ ಪ್ರಾಣಿಗಳಾಗಲೀ, ಮಾನವರಾಗಲೀ ವಾಯುವಿಲ್ಲದೆ ಬದುಕಲಾರವು. ಹೊರಗಡೆ ನಾವು ಯಾವುದನ್ನು **ವಾಯು** ಎಂದು ಕರೆಯುತ್ತೇವೆಯೋ, ಅದನ್ನೇ ದೇಹದ ಒಳಗಡೆ **ಪ್ರಾಣ** ಎಂದು ಕರೆಯುತ್ತೇವೆ. ಇವೆರಡಕ್ಕೂ ಬೇರೆ ಬೇರೆಯ ಹೆಸರುಗಳು ಇವೆಯೇ ಹೊರತು ಅವೆರಡೂ ಬ್ರಹ್ಮದ ಒಂದೇ ರೂಪಗಳಾಗಿವೆ. ಈ ರೀತಿ ಪ್ರಾಣವನ್ನು ಧ್ಯಾನಿಸುವ ಮೂಲಕ ಬ್ರಹ್ಮನನ್ನು ಅರಿಯಬಹುದು. ವಾಯುವು ಹೇಗೆ ಒಳಗೆ ಹೊರಗೆ ಎಲ್ಲೆಡೆ ಆವರಿಸಿಕೊಂಡಿದೆಯೋ, ಅದೇ ರೀತಿ ಬ್ರಹ್ಮವು ಎಲ್ಲವನ್ನೂ, ಅಂದರೆ ವಾಯುವನ್ನೂ ಸೇರಿ ಆಕ್ರಮಿಸಿಕೊಂಡಿದೆ; ಇದನ್ನು ಸಾಕ್ಷಾತ್ಕರಿಸಿಕೊಳ್ಳಬೇಕು ಎಂದು ರೈಕ್ವನು ಉಪದೇಶಿಸಿದನು.

ಇದನ್ನು ಮನದಟ್ಟು ಮಾಡಿಕೊಡಲು ಒಂದು ಕಥೆಯನ್ನು ಕೂಡ ಹೇಳಿದನು. ಒಂದು ಸಲ ಶೌನಕ ಮತ್ತು ಕಾಕ್ಷಸೇನಿ ಎಂಬ ಇಬ್ಬರು ಋಷಿಗಳು ಒಟ್ಟಿಗೆ ಊಟಮಾಡುತ್ತಿದ್ದರು. ಆಗ ಅಹಂಕಾರದಿಂದ ತುಂಬಿದ್ದ ಬ್ರಹ್ಮಚಾರಿಯೊಬ್ಬನು ಬಂದು ಆ ಋಷಿಗಳ ಬಳಿ ಭಿಕ್ಷೆ ಬೇಡಿದನು. ಆದರೆ ಅವರು ಅವನಿಗೆ ಏನನ್ನೂ ಕೊಡಲಿಲ್ಲ. ಆಗ ಅವನು ತನ್ನಲ್ಲಿರುವ ಬ್ರಹ್ಮನಿಗೆ ಭಿಕ್ಷೆ ನಿರಾಕರಣೆಯಾಯಿತೆಂದು ಹೇಳಿದನು. ಅದಕ್ಕೆ ಅವರು "ಬ್ರಹ್ಮನು ನಿನ್ನೊಬ್ಬನಲ್ಲೇ ಏನಿಲ್ಲ. ಅವನು ಆಶ್ರಯದಾತನಾಗಿ ಎಲ್ಲ ವಸ್ತುಗಳಲ್ಲಿಯೂ ಇದ್ದಾನೆ. ಎಲ್ಲಕ್ಕೂ ಬ್ರಹ್ಮವೇ ಮೂಲ. ಬ್ರಹ್ಮವೊಂದೇ ಸತ್ಯ" ಎಂದು ಹೇಳಿ ಅವನ ಅಹಂಕಾರವನ್ನು ತಗ್ಗಿಸಿದರು; ನಂತರ ಅವನಿಗೆ ಊಟೋಪಚಾರಗಳನ್ನಿತ್ತರು.

ಹೀಗೆ ರೈಕ್ವನ ಉಪದೇಶವನ್ನು ಜಾನಶ್ರುತಿಯು ಕೇಳಿಸಿಕೊಂಡನು. ತೀಕ್ಷ್ಣಬುದ್ಧಿಯುಳ್ಳವನೂ, ಬ್ರಹ್ಮಸಾಕ್ಷಾತ್ಕಾರಕ್ಕಾಗಿ ತೀವ್ರ ಬಯಕೆಯುಳ್ಳವನೂ ಆದ ಅವನು ರೈಕ್ವನ ಉಪದೇಶವನ್ನು ಸರಿಯಾಗಿ ಅರ್ಥಮಾಡಿಕೊಂಡು ಬ್ರಹ್ಮಜ್ಞಾನಿಯಾದನು.

## ವಿನೋದದಿಂದ ವೇದಾಂತ

**ಸ್ಥ**ಳೀಯ ಮಿಲಿಟರಿ ರೈಫಲ್ ಅಭ್ಯಾಸದ ಪ್ರದೇಶದಲ್ಲಿ ಸಾರ್ಜೆಂಟ್ ಮ್ಯಾಕ್‌ನ ಕೈಕೆಳಗೆ ಹುಡುಗರೆಲ್ಲರೂ ಚೆನ್ನಾಗಿಯೇ ಷೂಟ್ ಮಾಡುತ್ತಿದ್ದರು. ಎಲ್ಲರೂ ಎಂದರೆ ಬ್ಲೂ ಎಂಬುವನೊಬ್ಬನನ್ನು ಬಿಟ್ಟು ಉಳಿದವರೆಲ್ಲರೂ. ಪುನಃ ಪುನಃ ಅವನು ಗುರಿಯಿಂದ ದೂರಕ್ಕೇ ಗುಂಡು ಹಾರಿಸುತ್ತಿದ್ದನು. ಸಾರ್ಜೆಂಟನು ಶಾಪ ಹಾಕಿದ, ಭಯಂಕರವಾಗಿ ಶಿಕ್ಷಿಸುವ ಬೆದರಿಕೆ ಹಾಕಿದ, ಏನೂ ಉಪಯೋಗವಾಗಲಿಲ್ಲ. ಕಡೆಗೂ ತಡೆಯಲಾರದೆ ಬೊಬ್ಬಿರಿದ, "ಅಯ್ಯೋ ದೇವರೆ! ಪೂರಾ ಸೈನ್ಯದಲ್ಲಿಯೇ ನಿನ್ನಷ್ಟು ಕೆಟ್ಟದಾಗಿ ಷೂಟ್ ಮಾಡುವವನಿಲ್ಲವೆನಿಸುತ್ತದೆ. ಹುಲ್ಲು ಒಟ್ಟುವ ಮನೆಯ ಗೋಡೆಯನ್ನು ಸಹಾ ನೀನು ಹತ್ತಡಿ ದೂರದಿಂದ ಕೂಡ ಷೂಟ್ ಮಾಡಲಾರೆ." ಅವನ ತಾಳ್ಮೆ ಪೂರಾ ಹೋಗಿತ್ತು. ಮುಂದುವರಿದು ಹೇಳಿದ: "ನೀನೇಕೆ ಆ ಗಾಡಿಖಾನೆಯ ಹಿಂದೆ ಹೋಗಿ ನಿನ್ನ ಮೂರ್ಖ ಶರೀರಕ್ಕೇ ಗುರಿಯಿಟ್ಟು ಗುಂಡು ಹಾರಿಸಿಕೊಳ್ಳಬಾರದು?" ಆ ಸಾಮಾನ್ಯ ಸೈನಿಕ ಸೊಗಸಾಗಿ ಸೆಲ್ಯೂಟ್ ಹೊಡೆದು ರೈಫಲ್‌ನ್ನು ಭುಜಕ್ಕೇರಿಸಿ ಆ ಗಾಡಿಖಾನೆಯ ಹಿಂದಕ್ಕೆ ಶಿಸ್ತಿನ ನಡೆಯಲ್ಲಿ ಹೋದ. ಮಾತಾಡಲಾರದಷ್ಟು ಮೂಕವಿಸ್ಮಿತನಾಗಿ ಸಾರ್ಜೆಂಟ್ ನಿಂತಲ್ಲೇ ನಿಂತಿದ್ದ. "ಢಂ" ಎನ್ನುವ ಶಬ್ದ ಆ ಮೌನವನ್ನು ಭೇದಿಸಿತು. "ಅಯ್ಯೋ ದೇವರೆ!" ಎಂದು ಸಾರ್ಜೆಂಟ್ ಮ್ಯಾಕ್ ನರಳಿದ, "ಅವನು ಹಾಗೇ ಮಾಡಿ ಬಿಟ್ಟ, ತನ್ನನ್ನು ತಾನೇ ಗುಂಡಿಕ್ಕಿ ಕೊಂದುಕೊಂಡೇಬಿಟ್ಟ." ಮರುಕ್ಷಣವೇ ಗಾಡಿಖಾನೆಯ ಇನ್ನೊಂದು ಪಾರ್ಶ್ವದಿಂದ ಸೊಗಸಾದ ಶಿಸ್ತಿನ ನಡೆಯಲ್ಲಿ ನಡೆಯುತ್ತಾ ಬ್ಲೂ ಸಾರ್ಜೆಂಟ್ ಮುಂದೆ ಬಂದು ನಿಂತು ಸೆಲ್ಯೂಟ್ ಹೊಡೆದು ಸ್ವಲ್ಪವೂ ಹಲ್ಲು ಕಿರಿಯದೆ ಹೇಳಿದ, "ಪುನಃ ಗುರಿ ತಪ್ಪಿತು, ಸಾರ್ಜೆಂಟ್!" **ನಮ್ಮ ಅವಸ್ಥೆಯೂ ಹಾಗೆಯೇ. ಇಡೀ ಜಗತ್ತಿನ ಜೊತೆಗೆ ಹೇಗೆ ನಡೆದುಕೊಳ್ಳುತ್ತೇವೆಯೋ, ಹಾಗೆಯೇ ನಮ್ಮಲ್ಲೂ ನಡೆದುಕೊಳ್ಳುತ್ತೇವೆ. ಬೇರೆಯವರನ್ನು ದ್ವೇಷಿಸುತ್ತಿದ್ದರೆ, ನಮ್ಮನ್ನೂ ದ್ವೇಷಿಸಿಕೊಳ್ಳುತ್ತೇವೆ; ಬೇರೆಯವರಿಗೆ ಕೆಡುಕು ಮಾಡಿದರೆ, ನಮಗೂ ಅದನ್ನೇ ಮಾಡಿಕೊಳ್ಳುತ್ತೇವೆ.** (ಆಸ್ಟ್ರೇಲಿಯಾ ಕಥೆ)

**ಪು**ಟ್ಟ ತಾರೋ ಶಾಲೆಯಿಂದ ಮನೆಗೆ ಹಿಂದಿರುಗಿದವನೇ ತಂದೆಯ ಬಳಿ ಹೋಗಿ ಕೇಳಿದ, "ಅಪ್ಪಾ, ನನಗೆ ಗಣಿತದಲ್ಲಿ ನೂರಕ್ಕೆ ನೂರು ನಂಬರು ಎಂದು ಹೇಳಿದ್ದರೆ ನೀನೇನು ಮಾಡುತ್ತಿದ್ದೆ?" ತಂದೆ ಹೇಳಿದ, "ಏನು, ಅಷ್ಟೊಂದೇ? ನಾನು ಮೂರ್ಛೆಯೇ ಹೋಗಿಬಿಡುತ್ತಿದ್ದೆ." "ನೋಡು ಅಪ್ಪ, ನನಗೆ ನೀನು ಮೂರ್ಛೆ ಹೋಗುವುದು ಸ್ವಲ್ಪವೂ ಇಷ್ಟವಿಲ್ಲ. ಅದಕ್ಕೋಸ್ಕರ ಐವತ್ತು ನಂಬರುಗಳಿಗಿಂತ ಜಾಸ್ತಿ ಪಡೆದುಕೊಳ್ಳದಂತೆ ನನ್ನನ್ನು ಎಚ್ಚರಿಕೆಯಿಂದ ನಿಯಂತ್ರಿಸಿಕೊಂಡೆ." **ಹಾಗೆಯೇ ನಮ್ಮ ದುರ್ಬಲತೆಗಳನ್ನು ಮುಚ್ಚಿಕೊಳ್ಳಲು ಅನೇಕ ಸಬೂಬುಗಳನ್ನು ಹೇಳುತ್ತೇವೆ. ನಮ್ಮ ದೌರ್ಬಲ್ಯಗಳ ಪ್ರಾಮಾಣಿಕ ವಿಶ್ಲೇಷಣೆ ಮಾಡಿಕೊಂಡಾಗ ಮಾತ್ರ, ನಮ್ಮ ವ್ಯಕ್ತಿತ್ವವನ್ನು ಹೆಚ್ಚು ಪರಿಶುದ್ಧವನ್ನಾಗಿಯೂ, ಉನ್ನತವನ್ನಾಗಿಯೂ ಮಾಡಿಕೊಳ್ಳಲು ಸಾಧ್ಯ.** (ಜಪಾನಿ ಕಥೆ)